ಓಡಿದೆ. ಅಲ್ಲಿ ಇನ್ನೊಂದು ಹೊಸ ಚಿತ್ರಣವಿತ್ತು. ಇನ್ನು ಸಣ್ಣದಾಗಿ ನರಳುತ್ತಲೇ ಇದ್ದ ವೇಲುವಿನ ಹಣೆಗೆ ಅಜ್ಜಿ ತಣ್ಣೀರು ಪಟ್ಟಿ ಬದಲಿಸುತ್ತ, ಅವನ ಬಾಯಿಗೆ ಯಾವುದೋ ಕಷಾಯ ಹುಯ್ಯುತ್ತ, ಚಡಪಡಿಕೆಯಿಂದಿದ್ದರು. 'ಜ್ವರ ಸುಡುತ್ತಿದೆ ಮುಂಡೇದಕ್ಕೆ, ಏನು ಮಾಡೋಣ?' ಅಂತ ಅಪ್ಪನೊಡನೆ ಚರ್ಚಿಸಿ ಕಡೆಗೊಂದು ತೀರ್ಮಾನವಾಯಿತು. ನಮ್ಮ ಮನೆಯ ಆಚೆ ಸ್ವಲ್ಪ ದೂರದಲ್ಲಿ ಸೊಸೈಟಿಯ ಕಾಟನ್ ಸೆಕ್ಷನ್ ನೂಲಿಗೆ ಬಣ್ಣ ಹಾಕುವ ಸಣ್ಣ ಕಾರ್ಯಾಗಾರವಿತ್ತು. ಅಲ್ಲಿ ಕೇರಳದವರೇ ಇಬ್ಬರು ಕೆಲಸಗಾರರಿದ್ದರು. ಅಪ್ಪ ಅಲ್ಲಿ ಹೋಗಿ ಹೇಳಿ ಬಂದರು. ಆ ಶಿವದಾಸ ಮತ್ತು ಕುಞ್ಞಿರಾಮ ಬಂದು ಕೂಡಲೇ ಇವನನ್ನು ಹಿಡಿದು ಎಬ್ಬಿಸಿಕೊಂಡು, ಕೈಹಿಡಿದೇ ತಮ್ಮ ಪುಟ್ಟ ಬಿಡಾರಕ್ಕೆ ಕರೆದೊಯ್ದಾಗ ನಮಗೇನೊ ಆಶ್ವಾಸವೆನಿಸಿತು.

ವೇಲಾಯುಧನ ಒಳಗೆ ಅವನಿಗಿಂತ ಒಳ್ಳೆಯ ವ್ಯಕ್ತಿಯೊಬ್ಬನಿದ್ದಾನೆ ಎಂದು ಅಜ್ಜಿ ಆಗಾಗ ಹೇಳುವುದಿತ್ತು. ಅಂತರಂಗದ ಸತ್ಯನಿಷ್ಠೆಯಿಂದ ಪ್ರೇರಣೆಗೊಂಡ ಪ್ರಾಮಾಣಿಕತೆ ಅವನ ವ್ಯಕ್ತಿತ್ವದಲ್ಲಿತ್ತು. ಶಿವದಾಸನಿಂದ ಅಪ್ಪ ಇವನ ಬಗೆಗಿದ್ದ ವಿವರಗಳನ್ನೆಲ್ಲಾ ಪಡೆದುಕೊಂಡಾಗ, ವಯಸ್ಸಿಗನುಗುಣವಾಗಿ ನನಗೂ ಅಷ್ಟಿಷ್ಟು ಅರ್ಥವಾಯ್ತು. ಕುಡಿತದ ಹೊರತಾಗಿ ತೀರ ಸಂಭಾವಿತ. ಊರಿಗೆ ಹೋದರೆ ವಯಸ್ಸಾದ ತಾಯಿಯೊಬ್ಬಳೇ. ಹೆಂಡತಿ ಇನ್ನಾರೊ ಒಬ್ಬನೊಡನೆ ಹೋಗಿ ದೂರವಾಗಿದ್ದಳು. ಇದ್ದ ಎರಡು ಮಕ್ಕಳನ್ನು ಇವನ ಬಳಿ ಸುಳಿಯಲೂ ಬಿಡುತ್ತಿರಲಿಲ್ಲ. ಅದೊಂದು ಕೊರಗಿನಲ್ಲಿ ಆಗಾಗ ಮಂಕಾಗಿ ಕೂರುತ್ತಿದ್ದ. ನನ್ನ ಬಗೆಗೆ ಇಂತಹ ನಲ್ಮೆ, ಸಾಹಚರ್ಯಕ್ಕೂ ಅದೇ ಕಾರಣವಿರಬಹುದೇ? ಈಗ ಹಾಗನಿಸ್ತಾಯಿದೆ. 'ಮಕ್ಕಳು ಹಕ್ಕಿಗಳಿದ್ದಂತೆ, ರೆಕ್ಕೆ ಬಲಿತ ಮೇಲೆ ಹಾರುವವರೇ ತಾನೆ?' ಎಂದು ಅಜ್ಜಿಯೊಡನೆ ಹೇಳ್ತಾಯಿದ್ದ. ತಿಂಗಳಿಗೊಮ್ಮೆ ಪೋಸ್ಟಾಫೀಸಿಗೆ ಹೋಗಿ ತಾಯಿಗೆ ಮನಿ ಆರ್ಡರಲ್ಲಿ ಅಷ್ಟಿಷ್ಟು ಹಣ ಕಳಿಸ್ತಾಯಿದ್ದ. ಜ್ವರ ಬಿಟ್ಟು ಗೆಲುವಾದ ಮೇಲೆ ಮತ್ತೆ ವಯನಾಡಿನ ತನ್ನೂರಿಗೆ ಹೋದಾಗಲೇ ಇಲ್ಲಿ ಮತ್ತೂ ಕೆಲವೊಂದು ಕೆಲಸದ ವಹಿವಾಟುಗಳನ್ನು ಒಪ್ಪಿ ಬರುವುದಾಗಿ ಹೇಳಿಹೋದ.

ಅಪ್ಪ ಶಾಲೆಯ ಒಂದೆರಡು ಕ್ಲಾಸುಗಳಿಗೆ ಬೆಂಚು–ಡೆಸ್ಕುಗಳನ್ನೆಲ್ಲಾ ವೇಲಾಯುಧನಲ್ಲೇ ಮಾಡಿಸಿದರು. ಒಂದೆರಡು ವರ್ಷ ಬಹಳವಾಗಿ ನಮ್ಮೂರಲ್ಲೆ ಉಳಿದ. ಬೇರೆ ಎಲ್ಲೇ ಇದ್ದರೂ ನಮ್ಮ ಮನೆಯ ಭೇಟಿಯನ್ನು ತಪ್ಪಿಸುತ್ತಿರಲಿಲ್ಲ. ಗೇಟಿನಲ್ಲಿ 'ಮಾಸ್ಟ್ರೆ' ಎನ್ನುವ ಕರೆ ಕೇಳಿದೊಡನೆ ಮೊದಲಿಗೆ ನಾನೇ ಹೊರಗೋಡುತ್ತಿದ್ದೆ. ವಯಸ್ಸಿಗೆ ಬರ್ತಾಯಿರುವ ಹುಡುಗಿ ಎಂದು ಅಮ್ಮನ ಹಿಂಜರಿತವಿದ್ದೂ ಆಚಾರಿಯ ವಿಷಯದಲ್ಲಿ ಬೇರೆ ಯಾವ ಆಲಾಪಗಳೂ ಇರಲಿಲ್ಲ. ನನಗಾಗಿ ತರ್ತಾ ಇದ್ದ ಆರೇಂಜ್‌ಮಿಠಾಯಿ, ಬಳೆ, ರಿಬ್ಬನ್, ಮಾಲೆಗಳೆಲ್ಲಾ ಅವನೊಳಗೆ ಅಲೆಯುತ್ತಿದ್ದ ಪುತ್ರವಾತ್ಸಲ್ಯದ ಪ್ರತೀಕಗಳು ಅಂತ ಅಜ್ಜಿಯ ಅನುಮೋದನೆಯಿತ್ತು. ನಾವು ಪ್ರತಿನಿತ್ಯ ಉಪಯೋಗಿಸುವ ಮಂಚ, ಮೇಜು, ಕುರ್ಚಿಗಳ ನಿಲುವಿನಲ್ಲಿ ವೇಲುವಿನ ನಲ್ಮೆಯ ನವಿರು ನಿರಂತರ ಅನುಭವವಾಗುತ್ತಿತ್ತು. 'ಬದುಕಿಗೆ ಅಸ್ತಿತ್ವ ಇರುತ್ತದೆ. ಸಾವಿನಲ್ಲೂ ಅದು ಇರಬೇಕು' ಅನ್ನುತ್ತಿದ್ದ.

ನಡುವೆ ತುಂಬಾ ಸಮಯ ಆಚಾರಿ ನಮ್ಮೂರಿಗೆ ಬರಲೇಯಿಲ್ಲ. ನನ್ನ ಮದುವೆ ಹೊತ್ತಿಗೆ ಅರೆಮನಸ್ಸಿನಿಂದಲೇ ಅವನಿಗೊಂದು ಕಾರ್ಡು ಕಳಿಸಿದ್ದರು. ತಾಯಿ ತೀರಿದ ಮೇಲೆ ಕೌಟುಂಬಿಕ ಬಂಧಗಳೆಲ್ಲ ಸಡಿಲಾಗಿ ಕುಡಿತವೊಂದೆ ಅವನ ಸಂಗಾತಿಯಾಗಿತ್ತು. ಕಾಲ ಅನ್ನುವುದು ನಿರ್ದಿಷ್ಟವಾಗಿರುವುದಕ್ಕಿಂತ ಹೆಚ್ಚು ನಿರ್ದಯವಾಗಿರುತ್ತದೆ. ಕಳೆದುಹೋದ ಒಂದು ಚಪ್ಪಲಿಗಾಗಿ ಉಳಿದಿರುವ ಇನ್ನೊಂದನ್ನು ಕೈಯಲ್ಲಿ ಹಿಡಿದು ಸಂತೆಯಲ್ಲಿ ಅಲೆಯುತ್ತಿರುವಂತಿದ್ದ. ಅಜ್ಜಿ ಅಳಿದ ವಿಚಾರ ತಿಳಿದು ಗೋಳಾಡಿ ಅತ್ತುಬಿಟ್ಟ. ನಾನು ವಿವಾಹಿತಳಾಗಿ ಆ ಮನೆ ಬಿಟ್ಟು ಹೋಗುವ ಬಗೆಗೂ ಅವನಲ್ಲಿ ವೇದನೆಯೇ ಕಾಣುತ್ತಿತ್ತು. ನನಗಾಗಿ ಸೊಗಸಾದ ಬ್ಯಾಂಗಲ್ ಸ್ಟ್ಯಾಂಡ್ ಒಂದನ್ನು